**ಪಿ.ಡಬ್ಲ್ಯು:1**

**ಸಾಕ್ಷಿಯನ್ನು ಇಂದು ದಿನಾಂಕ: 16-02-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದ:**

ನಾನು S.S.L.C ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ಪ್ರಕರಣದ ಅರ್ಜಿಯ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಪ್ರಸ್ತುತ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಪೂರ್ವದಲ್ಲಿ ಯಾವುದೇ ಇಲಾಖೆಯಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಪ್ರಸ್ತುತ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಶಿಶು ಅಭಿವೃದ್ಧಿ ಇಲಾಖೆಯವರಿಗೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಹೌದು. ಅದರಂತೆ ಯಾವುದೇ ಫಿರ್ಯಾದಿಯನ್ನು ದಾಖಲಿಸಿರುವುದಿಲ್ಲ ಎಂದರೆ ಹೌದು. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಇಂಗ್ಲೀಷ ಕೇವಲ ಓದಲು ಮಾತ್ರ ಬರುತ್ತದೆ. ನನ್ನ ಮದುವೆ 1 ನೇ ಎದುರುದಾರನ ಜೊತೆ ದಿ: 11-02-2018 ರಂದು ಬಿರಡಿಯಲ್ಲಿ 1 ನೇ ಎದುರುದಾರನ ಮನೆಯ ಮುಂದೆ ಆಗಿರುತ್ತದೆ. ನಮ್ಮ ಮದುವೆಯ ಖರ್ಚನ್ನು ಗಂಡನ ಮನೆಯವರು ಮಾತ್ರ ನೋಡಿಕೊಂಡಿರುತ್ತಾರೆ ಎಂದರೆ ಗಂಡನ ಮನೆಯವರು ಸಹ ಕೊಟ್ಟಿರುತ್ತಾರೆ ಹಾಗೂ ನಮ್ಮ ಮನೆಯವರು ಸಹ ಖರ್ಚನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮದುವೆಗೆ ನಾವು ಸಹ ಖರ್ಚನ್ನು ಮಾಡಿರುತ್ತೇವೆ ಎಂದು ಅರ್ಜಿಯಲ್ಲಿ ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಯಿಸಿರುತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಮೌನವಹಿಸುತ್ತಾರೆ. ನಾವು ಮದುವೆಯಲ್ಲಿ 5 ಬಂಗಾರದ ಸಾಮಾನುಗಳು ಹಾಗೂ ರೂ.2 ಲಕ್ಷ ಬಾಂಡೆ ಸಾಮಾನುಗಳನ್ನು ಕೊಟ್ಟಿರುತ್ತೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರು ಮಾಡಿರುತ್ತೇನೆ. ಸದರಿ 5 ಬಂಗಾರದ ಸಾಮಾನುಗಳು ಎಷ್ಟೆಷ್ಟು ಗ್ರಾಂ ಗಳದ್ದು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ರೂ.2 ಲಕ್ಷ ಬಾಂಡೆ ಸಾಮಾನುಗಳನ್ನು ನಾವು ಕೊಟ್ಟಿದ್ದು , ಯಾವ ಯಾವ ಬಾಂಡೆ ಸಾಮಾನಗಳು ಎಷ್ಟು ಕಿಮ್ಮತ್ತಿನವು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. 1 ತೋಲೆಯ 5 ಬಂಗಾರದ ಸಾಮಾನಗಳು , ರೂ.2 ಲಕ್ಷ ರೂಪಾಯ ಬಾಂಡೆ ಸಾಮಾನಗಳು ಹಾಗೂ ಮದುವೆಯ ಖರ್ಚನ್ನು ಸಹ ನಮ್ಮ ತಂದೆಯ ಮನೆಯವರು ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಮದುವೆಯಾದ ನಂತರ ನಾನು 1 ನೇ ಎದುರುದಾರನ ಜೊತೆಗೆ 15 ದಿನಗಳ ಕಾಲ ಬಾಳ್ವೆ ಮಾಡಿರುತ್ತೇನೆ. ನನ್ನ ಗಂಡನ ಮನೆಯಲ್ಲಿ ನನ್ನ ಅತ್ತೆ, ಮಾವ , ಮೈದುನ , ನೆಗೆಣಿ , ನನ್ನ ಗಂಡ ಮತ್ತು ನಾನು ಇದ್ದೆವು. ಸದರಿಯವರೆಲ್ಲರೂ ನನ್ನ ಗಂಡನ ಮನೆಯಲ್ಲಿ ಇರುತ್ತಾರೆ ಎಂದು ಅರ್ಜಿಯಲ್ಲಿ ಹಾಗೂ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಯಿಸಿರುತ್ತೇನೆ. 2 ನೇ ಎದುರುದಾರರು ಏನು ಆರೋಗ್ಯ ಸಮಸ್ಯೆ ಇತ್ತು ಎಂದು 2 ನೇ ಎದುರುದಾರ ನನಗೆ ಹೇಳುತ್ತಿರಲಿಲ್ಲ. ನಾನು ವೈವಾಹಿಕ ಜೀವನ ನಡೆಸಲು ಹೋದ ದಿನದಿಂದ ನಾನು 2 ನೇ ಎದುರುದಾರನ ಜೊತೆ ಮಾತನಾಡುತ್ತಿರಲಿಲ್ಲ. 3 ನೇ ಎದುರುದಾರರು ಏನು ಆರೋಗ್ಯ ಸಮಸ್ಯೆ ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರಿಗೆ ಯಾವುದೇ ಆರೋಗ್ಯ ಸಮಸ್ಯೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಈ ಅರ್ಜಿಯನ್ನು ನಾನು ನನ್ನ ಗಂಡ , ಅತ್ತೆ ಮತ್ತು ಮಾವರ ವಿರುದ್ದ ಹಾಕಿರುತ್ತೇನೆ. ನಾನು ವೈವಾಹಿಕ ಜೀವನ

ನಡೆಸಲು ಹೋದ ದಿನದಿಂದ 3 ನೇ ಎದುರುದಾರರು ನನ್ನ ಜೊತೆ ಜಾಸ್ತಿ ಮಾತನಾಡುತ್ತಿರಲಿಲ್ಲ. 2 ಮತ್ತು 3 ನೇ ಎದುರುದಾರರಿಗೆ ಅನಾರೋಗ್ಯ ಸಮಸ್ಯೆ ಇದ್ದ ಕುರಿತು ನನಗೆ ಗೊತ್ತಿದ್ದರು ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ನೇ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದರಿಂದ, ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೆ ಸರಿ ಅದೆ,**

**Sd/-**

**ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**

**ಬನಹಟ್ಟಿ.**